# ತಂಗಿಗ್ಹೇಳಿದ ಕೃಷ್ಣ ಚಂದದಲಿ ಬುದ್ಧಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 256.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 203.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics given here are as per Ref. 1. The wordings in Ref. 2 are same as in Ref. 1 except one word which is given in yellow highlights. Singer has followed these lyrics.

ರಾಗ: ಕಾಂಭೋಜಿ ತಾಳ: ಝಂಪೆ

ತಂಗಿಗ್ಹೇಳಿದ ಕೃಷ್ಣ ಚಂದದಲಿ ಬುದ್ಧಿ || ಪ ||
ಅತ್ತೆಯ ಮನೆಯಲ್ಲಿ ಇರುವಂಥ ಸುದ್ದಿ || ಅಪ ||

ಯಾರೇನು ಅಂದರು ಮೋರೆಯನು ತಿರುಹದಿರು
ಮೋರೆ ಮೇಲೆ ಕೈಯೆತ್ತಿ (ಮೇಲಕ್ಕೆತ್ತಿ) ಬಲ್ಲೆಳೆಂದೆಣಿಸಿ
ವಾರಿಗೇವರ ಕೂಡಿ ನೀರನ್ನು ತರುವಾಗ
ವಾರೆಗಣ್ಣಿಲಿ ನೋಟ ನೋಡದಿರು ಕಂಡ್ಯ || 1 ||

ಪರರ ಒಡವೆಯ ಕಂಡು ದುರುಳ ಮಾತಾಡದಿರು
ನೆರೆಹೊರೆಯರಿಗೆ ನೀನು ತಲೆವಾಗಿ ನಡೆಯೆ
ಪರರ ಮಾತುಗಳಿಂದ ಮರುಳಳೆಂದು ಎಣಿಸಬೇಡ
ನೆರೆಹೊರೆಯರ ಕಂಡು ನೀ ಬದುಕು ಮಾಡಮ್ಮ || 2 ||

ಭಂಗಾರದ ಪೇಟೆಯೊಳು ಅಂಗಡಿಗೆ ಹೋಗದಿರು
ಅಂಗನೇರಿಗೆ ಮಾನಭಂಗಾಗಿ ನಡೆಯೆ
ಅಂಗನೇರಿಗೆ ನಿನ್ನಂತರಂಗವ ಹೇಳದಿರು
ಭಂಗಾರ ವಸ್ತುಗಳು ಮುಚ್ಚಿಕೊಳ್ಳಮ್ಮ || 3 ||

ಹಾಕಿದ್ದು ನೀನುಂಡು ಬೇಕೆಂದು ಬೇಡದಿರು
ಸಾಕು ಸಾಕು ಎಂಬ ನಾಚಿಕೆಯ ಹಿಡಿಯೆ
ನಾಕು ಮಂದಿಯರೊಡನೆ ಕೋಕೆ ಮಾತಾಡದಿರು
ಲೋಕದೊಳಿವಳೊಬ್ಬ ಮೂಕಿಯೆಂದೆನಿಸೆ || 4 ||

ಇಷ್ಟರು ಅಂದರು ನಿಷ್ಠೂರವಾಡದಿರು
ಘಟ್ಟಿ ಮಾಡಮ್ಮ ನಿನ್ನ ಮನಸು
ಸೃಷ್ಟಿಯೊಳಗೆ ನಮ್ಮ ಪುರಂದರ ವಿಠಲನ್ನ
ಶ್ರೇಷ್ಠನಾದ ಕೃಷ್ಣನ್ನ ತಂಗಿಯೆಂದೆನಿಸೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ವಾರಿಗೇವರ** – ಓರಗೆಯವರ, ಒಂದೇ ವಯಸ್ಸಿನವರ.

**ಅಂಗನೇರಿಗೆ** – ಅಂಗನೆಯರಿಗೆ, ಹೆಂಗಳೆಯರಿಗೆ.

**ಮಾನಭಂಗಾಗಿ ನಡೆಯೆ** – ಉದ್ದಂಡತನವನ್ನು ಬಿಟ್ಟು ನಡೆದುಕೋ.

**ಕೋಕೆ ಮಾತಾಡದಿರು** – ಕೋಕ ವಾಕ್ಯಗಳು; ಅಶ್ಲೀಲ ಶಬ್ದಗಳನ್ನು ಬಳಸಬೇಡ.

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Sub-Category:** buddi, Krishna, tangi, vArthe, mane, atte, kai, niru, kannu, abharana, bangara, oota, nachike, loka, mana,
**Pravachana:** NA
**Explanation:** NA